ಸದನಗಳು ಅಂಗೀಕರಿಸಿದ್ದು ಮಾನ್ಯ ರಾಷ್ಟ್ರಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಈ ಶಾಸನದಲ್ಲಿ "ಕಾಮನ್‌ಪೂಲ್ ಫಂಡ್" ಎಂಬ ನಿಧಿಯನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ. ಈ ಫಂಡ್‌ನಿಂದ ದೇವಾಲಯಗಳ ನಿರ್ವಹಣೆ ಪ್ರಸ್ತಾಪ ಇದೆ.

2. ಸದರಿ ಏಕರೂಪ ಶಾಸನ ಕಾಯ್ದೆ ಜಾರಿಗೆ ಬಂದ ನಂತರ ಇದನ್ನು ಕಾರ್ಯರೂಪಕ್ಕೆ ತರಲು ಪರಿಶೀಲಿಸಲಾಗುವುದು.

ಮೈಸೂರಿನ ತಾಲ್ಲೂಕಿನ ಕಡಕೊಳದಿಂದ ಜಲಪುರದವರೆಗೆ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು.

2342(2851) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ತಾಲ್ಲೂಕಿನ ಕಡಕೊಳದಿಂದ ಜಲಪುರದವರೆಗೆ ಕೈಗಾರಿಕೆಯನ್ನು ಆಕರ್ಷಿಸಲು ಎಲ್ಲಾ ಪೂರಕ ಸೌಲಭ್ಯಗಳು ಲಭ್ಯವಿದ್ದು ಇಲ್ಲಿ ಕೈಗಾರಿಕಾ ಅಭಿವೃದ್ಧಿ ಪಡಿಸಲು ಕರ್ನಾಟಕ ಕೈಗಾರಿಕಾಭಿವೃದ್ಧಿ ನಿಗಮದಿಂದ ಕೈಗೊಂಡಿರುವ ಕ್ರಮವೇನು;

ಆ) ಈಗಾಗಲೇ ಬಂದಿರುವ ಮನವಿಗಳ ಮೇಲೆ ಸರ್ಕಾರ ಯಾವ ಕ್ರಮಕೈಗೊಳ್ಳಲಾಗಿದೆ; ಇದನ್ನು ಯಾವಾಗಿನಿಂದ ಅಭಿವೃದ್ಧಿಗೊಳಿಸಲಾಗುವುದು;

ಇ) ಮೈಸೂರು ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪಿತವಾಗಿದೆ; ಇದರಲ್ಲಿ ಎಷ್ಟು ಕಾರ್ಯಾರಂಭ ಮಾಡಲಾಗಿದೆ.

ಈ) ಮೈಸೂರು ನಗರ ಸುತ್ತ ನಷ್ಟದಲ್ಲಿರುವ ಎಷ್ಟು ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಲಾಗಿದೆ;

ಉ) ನಷ್ಟದಲ್ಲಿರುವ ಉದ್ದಿಮೆ ಎಷ್ಟು ಇವುಗಳನ್ನು ಲಾಭಗಳಿಸುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಈಗಾಗಲೇ ನಂಜನಗೂಡು ಮತ್ತು ತಾಂಡ್ಯ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿರುತ್ತಾರೆ. ಇದರಲ್ಲಿ ನಂಜನಗೂಡಿನ ಕೈಗಾರಿಕಾ ಪ್ರದೇಶದಲ್ಲಿ 25 ಎಕರೆ ಹಾಗೂ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ 7(ಎಕರೆ ಕೈಗಾರಿಕಾ ಪ್ರದೇಶವು ಹಂಚಿಕೆಗಾಗಿ ಖಾಲಿ ಇರುತ್ತದೆ.

ಅ) ಬೇಡಿಕೆ ಹೆಚ್ಚಿಗೆ ಬಂದಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೆಚ್ಚುವರಿ ಭೂಮಿಯನ್ನು ಅಭಿವೃದ್ಧಿಪಡಿಸುವುದು.

ಇ) 434 ಸಣ್ಣ ಪ್ರಮಾಣದ ಕೈಗಾರಿಕೆಗಳು, 2 ಮಧ್ಯಮ ಪ್ರಮಾಣದ ಕೈಗಾರಿಕೆಗಳು ಸ್ಥಾಪಿತವಾಗಿ ಕಾರ್ಯಾರಂಭ ಮಾಡಿವೆ.

ಈ) ಈವರೆಗೆ 14 ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲಾಗಿದೆ.

ಉ) ಸಣ್ಣ ಮತ್ತು ಮಧ್ಯಮ ರೋಗಗ್ರಸ್ತ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಈ ಕೆಳಗಿನ ಸವಲತ್ತುಗಳನ್ನು ನೀಡಲಾಗುವುದು:-

1) ದಿನಾಂಕ 26-12-1996ರ ಸರ್ಕಾರಿ ಆದೇಶ ಸಂಖ್ಯೆ:ಸಿಐ.112 : ಪಿಯುಎಂ. 93ರಲ್ಲಿ ಇದ್ದಂತಹ ಮಾರ್ಜಿನ್ ಮನಿ ಯೋಜನೆಯನ್ನು ಮುಂದುವರೆಸಲಾಗಿದೆ.

2) ಕಾರ್ಖಾನೆಗಳು ಮುಚ್ಚಲಾದ ಸಮಯದಲ್ಲಿ ಕೆ.ಪಿ.ಟಿ.ಸಿ.ಎಲ್.ನವರು ಫಿಕ್ಸೆಡ್ ಮತ್ತು ಡಿಮ್ಯಾಂಡ್ ಚಾರ್ಜುಗಳನ್ನು ಮಾಡುವುದಿಲ್ಲ.

3) ಕೆ.ಪಿ.ಟಿ.ಸಿ.ಎಲ್.ಗೆ ಕಾರ್ಖಾನೆಗಳಿಂದ ಬಾಕಿ ಇದ್ದ ಹಣವು ಮರುಪಾವತಿ ಮಾಡಲು ಆರು ವರ್ಷ ಅವಧಿಯಲ್ಲಿ ಅಂದರೆ, ಪ್ರತಿ ವರ್ಷದಲ್ಲಿ ಎರಡು ಕಂತಿನಲ್ಲಿ ಕಟ್ಟಬಹುದಾಗಿದೆ. ಶೇಕಡಾ 1: 2 ರಷ್ಟು ಬಾಕಿದಾರ ಘಟಕಗಳಿಗೆ ಕಡಿಮೆ ಮಾಡಲಾಗುವುದು.

4) ತೆರಿಗೆ ಇಲಾಖೆಗೆ, ತೆರಿಗೆ ಬಾಕಿಯನ್ನು 6 ವರ್ಷಗಳಲ್ಲಿ, 6 ತಿಂಗಳಿಗೊಮ್ಮೆ ಪ್ರತಿ ವರ್ಷ ಸರಳ ಬಡ್ಡಿ ಶೇಕಡಾ 1: 2 ರಷ್ಟು ತುಂಬಲು ಅವಕಾಶವಿರುತ್ತದೆ.

5) ಘಟಕಗಳು ಮುಚ್ಚಿರುವ ಸಮಯದಲ್ಲಿ ಕೆ.ಪಿ.ಟಿ.ಸಿ.ಎಲ್. ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಬಡ್ಡಿಯನ್ನು ವಿಧಿಸಬಾರದು.

6) ಘಟಕಗಳು ಮುಂದೆ ತೆರಿಗೆ ಪಾವತಿ ಮಾಡಬೇಕಾದ್ದಲ್ಲಿ, ಬಡ್ಡಿ ರಹಿತ ಮೂರು ವರ್ಷಗಳ ಕಾಲ ಮುಂದೂಡಬಹುದಾಗಿದೆ.

ಮುಜರಾಯಿ ಇಲಾಖೆ ವತಿಯಿಂದ ಬಿಡುಗಡೆಯಾಗಿರುವ ಹಣ.

2344(2832) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮುಜರಾಯಿ ಇಲಾಖೆಯಿಂದ ಕಳೆದ ವರ್ಷ ಎಷ್ಟು ಅನುದಾನ (ಆರಾಧನಾ ಹೊರತುಪಡಿಸಿ) ಚಾಮರಾಜನಗರ ಜಿಲ್ಲೆಗೆ ಬಿಡುಗಡೆಯಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)